## ಬುತ್ತಿ ಚಿಗುರು

### ಜಿಪುಣೇಂದ್ರನ ಮಗಳ ಮದುವೆ

ಜಿಪುಣ ಗುಂಡ, ತನ್ನ ಮಗಳ ಮದುವೆಗೆ ಆದಷ್ಟು ಕಡಿಮೆ ಮಂದಿಯನ್ನು ಆಹ್ವಾನಿಸಬೇಕೆಂದು ನಿರ್ಧರಿಸಿದ. ಇದಕ್ಕಾಗಿ ಸ್ವಾಮೀಜಿಯೊಬ್ಬರ ಬಳಿ ಸಲಹೆಯನ್ನೂ ಕೇಳಿದ. 'ನಾನು ಎಲ್ಲರನ್ನೂ ಕರೆಯಬೇಕು. ಆದರೆ ಮದುವೆಗೆ ಕಡಿಮೆ ಜನ ಬರಬೇಕು. ಹಾಗೆ ಒಂದು ಉಪಾಯ ಹೇಳಿ' ಎಂದು. ಅದಕ್ಕೆ ಅವರು, 'ನೋಡಿ, ಗುಂಡಣ್ಣನವರೇ ನಿಮ್ಮ ಮಗಳ ಲಗ್ನ ಪತ್ರಿಕೆಯಲ್ಲಿ, ವಿಶೇಷ ಸೂಚನೆಯೆಂಬಂತೆ ಮದುವೆಯಾಗಿ ಈವರೆಗೆ ಜಗಳ ಆಡದೇ ಸುಖ ಸಂತೋಷದಿಂದ ಇರುವವರು ಮಾತ್ರ ಬಂದು ಆಶೀರ್ವದಿಸಬೇಕಾಗಿ ವಿನಂತಿ ಎಂದು ಮುದ್ರಿಸಿ ಹಂಚಿ ಬಿಡಿ ಸಾಕು' ಎಂದರು. ಮದುವೆಯ ದಿನ ಮನೆಮಂದಿಯನ್ನು ಬಿಟ್ಟರೆ ಬೇರಾರೂ ಹಾಜರಾಗಿರಲಿಲ್ಲ.

**ಶಂಕರೇಗೌಡ ತುಂಬಕೆರೆ**



### ಕಿವಿ ಯಂತ್ರ

ಕಿವಿ ಸ್ವಲ್ಪ ಮಂದವಾಗಿ ಕೇಳುತ್ತಿದ್ದ ಹಳ್ಳಿಗನೊಬ್ಬ ಪಟ್ಟಣದಲ್ಲಿದ್ದ ಶ್ರವಣದ ಆಸ್ಪತ್ರೆಗೆ ಬಂದ. 'ಸರಿಯಾಗಿ



ಕಿವಿ ಕೇಳುತ್ತಿಲ್ಲ. ಚೆಕ್ ಮಾಡಿ ಕಡಿಮೆ ರೇಟಿಂದು ಒಂದ್ ಮಷೀನು ಕೊಡಿ ಡಾಕ್ಟ್ರೇ' ಎಂದ. ಕಿವಿ ಮಷೀನು ಮೂರು ಸಾವಿರದಿಂದ ಆರಂಭವಾಗಿ 60 ಸಾವಿರದತನಕ ಇದ್ದಾವೆ ಎಂದರು ವೈದ್ಯರು. 'ಅಯ್ಯೊ, ಅಷ್ಟೆಲ್ಲಾ ರೇಟಿಂದು ಬ್ಯಾಡ, ಕಡಿಮೆ ಬೆಲೆದು ಇದ್ರೆ ಬರ್ಕೊಡಿ' ಎಂದ. ಅವರು, ಪುಟ್ಟ ಬಟನ್ ಥರ ಇರುವ ಒಂದು ವಸ್ತುವನ್ನು ಕೊಡುತ್ತ, 'ಹಾಗಾದ್ರೆ ಇದನ್ನ ಬಳಸಿ' ಎಂದರು. 'ಎಷ್ಟು ಇದಕ್ಕೆ?' ಎಂದ. '100 ರೂಪಾಯಿ' ಎಂದ. ಅವನು ಖುಷಿಯಿಂದ, 'ಇದನ್ನ ಹಾಕ್ಕೊಂಡ್ರೆ ಕಿವಿ ಕೇಳಿಸುತ್ತಾ?' ಎಂದು ಕೇಳಿದ. ಡಾಕ್ಟ್ರು, 'ಇಲ್ಲ, ಆದರೆ ಜನ ನೀನು ಇದನ್ನು ಹಾಕಿಕೊಂಡಿದ್ದು ನೋಡಿ ನಿನ್ನೊಡನೆ ಜೋರಾಗಿ ಮಾತಾಡ್ತಾರೆ. ಜೊತೆಗೆ ಕೈಸನ್ನೆಯನ್ನೂ ಮಾಡುತ್ತಾರೆ. ಆಗ ನೀನು ಎದುರಿನವರು ಏನು ಹೇಳುತ್ತಿದ್ದಾರೆ ಎಂದು ಅರ್ಥಮಾಡಿಕೊಳ್ಳಬಹುದು' ಎಂದ.

**ಅರವಿಂದ ಜಿ.ಜೋಷಿ**